**ಈ ಸಾಕ್ಷಿಯನ್ನು ದಿನಾಂಕ 08.06.2023 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರಃ ಕೆ ವಿ ಕೆ ವಕೀಲರಿಂದಃ-**

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಸರ್ವೆ ನಂಃ 122 ರ ಮೂಲ ಮಾಲೀಕರ ಹೆಸರನ್ನು ನಂಜಪ್ಪರೆಡ್ಡಿ ಎಂದು ಹೇಳಿರುತ್ತೇನೆ. ಸದರಿ ಆಸ್ತಿ ನಂಜಪ್ಪರೆಡ್ಡಿರವರ ಪಿತ್ರಾರ್ಜಿತ ಆಸ್ತಿ. ಸರ್ವೆ ನಂಃ 122 ಇದು ನಂಜಪ್ಪರೆಡ್ಡಿರವರ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರಿಸಿಲ್ಲ ಎಂದರೆ ಸರಿಯಲ್ಲ. ನಂಜಪ್ಪರೆಡ್ಡಿರವರ ಪೂರ್ವಜರು ಯಾರು ಸದರಿ ಜಮೀನಿನ ಮಾಲೀಕರು ಎಂದರೆ ಸಾಕ್ಷಿಯು ಈಗ ಆ ಬಗ್ಗೆ ಹೇಳಲು ನೆನಪಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಃ 122 ಇದು ನಂಜಪ್ಪರೆಡ್ಡಿರವರ ಪಿತ್ರಾರ್ಜಿತ ಎಂದು ತೋರಿಸಲು ಈಗಾಗಲೇ ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ನನ್ನ ಬಳಿ ಬೇರೆ ಯಾವುದೇ ದಾಖಲೆಗಳಿರುವುದಿಲ್ಲ.

ದಿಃ 14-10-1968 ರ ಕ್ರಯಪತ್ರದ ಜೆರಾಕ್ಸ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರಿಸಿದ್ದು, ಅದರ ದೃಡಿಕೃತ ನಕಲನ್ನು ಪಡೆದುಕೊಳ್ಳಬೇಕು. ಸದರಿ ಕ್ರಯಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ದಿಃ 14-10-1968 ರ ಕ್ರಯಪತ್ರದ ಜೆರಾಕ್ಸ ಪ್ರತಿಯನ್ನು ತೋರಿಸಿದಲ್ಲಿ ಗುರುತಿಸುತ್ತೀರಾ ಎಂದರೆ ಸಾಕ್ಷಿಯು ಕಾಲಾವಕಾಶಬೇಕು ಎಂದು ಸಾಕ್ಷ್ಯ ನುಡಿದಿದ್ದು, ನಂತರ ಅದನ್ನು ತೋರಿಸಿದಲ್ಲಿ ಗುರುತಿಸುತ್ತೇನೆಂದು ನುಡಿದಿರುತ್ತಾರೆ. ಸಾಕ್ಷಿಗೆ ದಿಃ 14-10-1968 ರ ಕ್ರಯಪತ್ರದ ಜೆರಾಕ್ಸ ಪ್ರತಿಯನ್ನು ತೋರಿಸಿದಾಗ ಸಾಕ್ಷಿಯು ಅದನ್ನು ಓದಿ ನೋಡಿ ನೋಡಿ, ಅದು ಹಳೆಗನ್ನಡದಲ್ಲಿ ಇದೆ, ಆದ್ದರಿಂದ ಅದನ್ನು ಓದಲಾಗುವುದಿಲ್ಲ ಎಂದು ನುಡಿಯುತ್ತಾರೆ.

ನಿಡಿ-10 ಕ್ರಯಪತ್ರದಲ್ಲಿ ಉಲ್ಲೇಖಿಸಲಾದ ದಾಖಲೆ ನಂಃ 3422 ಕ್ರಯಪತ್ರದ ದಿಃ 14-10-1968 ಮತ್ತು ನನಗೆ ತೋರಿಸಲಾದ ದಿಃ 14-10-1968 ರ ಕ್ರಯಪತ್ರದ ಜೆರಾಕ್ಸ ಪ್ರತಿಯಲ್ಲಿ ಕಾಣಿಸಲಾದ ದಾಖಲೆ ನಂಬರ್ ಒಂದೇ ಇದೆ ಎಂದರೆ ಸಾಕ್ಷಿಯು ಒಂದೇ ಇರುತ್ತದೆ ಎಂದು ನುಡಿಯುತ್ತಾರೆ. ದಿಃ 14-10-1968 ರ ಕ್ರಯಪತ್ರದಲ್ಲಿ ಸರ್ವೆನಂಃ 122 ರ ಕ್ಷೇತ್ರ 4 ಎಕರೆ 16 ಗುಂಟೆ ಎಂದು ಕಾಣಿಸಲಾಗಿದೆ ನುಡಿದು, ನಂತರ ಸದರಿ ದಾಖಲೆಯನ್ನು ನೋಡಿ ಉತ್ತರ ಹೇಳಬೇಕು ಎಂದು ನುಡಿಯುತ್ತಾರೆ.

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-15.pdf

ಕುಂದಲಹಳ್ಳಿ ಗ್ರಾಮದ ಮೂಲ ಸರ್ವೆ ನಂ: 122 ರ ಜಮೀನು ಇನಾಮ್ ಜಮೀನು ಎಂದರೆ ಸರಿಯಲ್ಲ. ನಂಜಪ್ಪರೆಡ್ಡಿ ಅಥವಾ ಅವರ ಪೂರ್ವಜರು ಸದರಿ ಸರ್ವೆ ನಂ: 122 ನ್ನು ರೀಗ್ರಾಂಟ್ ಮಾಡಲು ಅರ್ಜಿ ಸಲ್ಲಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ-10 ಕ್ರಯಪತ್ರ ಮಾಡಿಕೊಳ್ಳುವ ಮುಂಚೆ 1968 ಕ್ಕಿಂತ ಮುಂಚಿನ ದಾಖಲೆಗಳನ್ನು ನೋಡಿಲ್ಲವೇ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯವಿಚಾರಣೆಯ ಎರಡನೇ ಖಂಡಿಕೆಯಲ್ಲಿ ಕಾಣಿಸಲಾದ ಚಕ್ಕುಬಂಧಿಯನ್ನು ಯಾವ ಆಧಾರದ ಮೇಲೆ ಕಾಣಿಸಿರುತ್ತೀರಿ ಎಂದರೆ ಸಾಕ್ಷಿಯು ಸ್ಕೆಚ್ ಮತ್ತು ಲಕ್ಷ್ಮಮ್ಮ ರವರು ವಾಸವಿದ್ದ ಬಗ್ಗೆ ನೋಡಿ ಕಾಣಿಸಿರುತ್ತೇವೆ ಎಂದು ನುಡಿಯುತ್ತಾರೆ. 1968 ರ ಕ್ರಯಪತ್ರದಲ್ಲಿಯ ಚಕ್ಕುಬಂಧಿಯನ್ನು ನೋಡಿ ಮುಖ್ಯವಿಚಾರಣೆಯಲ್ಲಿ ಬರೆಯಿಸಿಲ್ಲವೇ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಕಾಣಿಸಲಾದ ಚಕ್ಕುಬಂಧಿ ಮತ್ತು 1968 ರ ಕ್ರಯಪತ್ರದಲ್ಲಿ ಕಾಣಿಸಲಾದ ಚಕ್ಕುಬಂಧಿ ಎರಡೂ ಬೇರೆ ಬೇರೆಯಾಗಿರುತ್ತವೆ ಎಂದರೆ ಸರಿಯಲ್ಲ.

ದಿ: 14-10-1968 ರ ಕ್ರಯಪತ್ರದಲ್ಲಿ ಸರ್ವೆ ನಂ: 122 ರ ಕ್ಷೇತ್ರವನ್ನು 1 ಎಕರೆ 19 ಗುಂಟೆ ಎಂದು ನಮೂದಿಸಲಾಗಿದೆ ಎಂದರೆ ನಾನು ಅದನ್ನು ನೋಡಿಲ್ಲ, ಆದ್ದರಿಂದ ಅದರ ಬಗ್ಗೆ ಈಗ ಹೇಳಲು ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದಲ್ಲಿ ಕಾಣಿಸಲಾದಂತೆ ಓದಿ ಹೇಳಿದ ಮಾಹಿತಿಯನ್ನು ಸಾಕ್ಷಿಯು ನನಗೆ ಈಗ ಹೇಳಲು ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಕಾಣಿಸಲಾದ 1 ಎಕರೆ 19 ಗುಂಟೆ ಜಮೀನಿನ ಪೂರ್ವಕ್ಕೆ ಪಟ್ಟಾಭಿರಾಮರೆಡ್ಡಿ, ಪಶ್ಚಿಮಕ್ಕೆ ಸರ್ಕಾರಿ ಜಾಗ, ಉತ್ತರಕ್ಕೆ ಚನ್ನಾರೆಡ್ಡಿ, ದಕ್ಷಿಣಕ್ಕೆ ಸಿ.ಜಯರಾಮರೆಡ್ಡಿ ಎಂದು ಕಾಣಿಸಲಾಗಿದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ದಿ: 14-10-1968 ರ ಕ್ರಯಪತ್ರದ ಮೂಲ ಪ್ರತಿ ಅಥವಾ ದೃಡೀಕೃತ ನಕಲನ್ನು ಹಾಜರಿಸಲು ಏನಾದರೂ ತೊಂದರೆ ಇದೆಯೇ ಎಂದರೆ ಸಾಕ್ಷಿಯು ದೃಡೀಕೃತ ನಕಲು ಸಿಗುವ ಬಗ್ಗೆ ವಿಚಾರಿಸಿ ನೋಡಬೇಕು ಎಂದು ನುಡಿಯುತ್ತಾರೆ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಸರ್ವೆ ನಂ: 122 ರ ಕ್ಷೇತ್ರ 1 ಎಕರೆ 19 ಗುಂಟೆ ಜಮೀನಿನ ಚಕ್ಕುಬಂಧಿಯನ್ನು ತಪ್ಪಾಗಿ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ: 122 ರ ಯಾವುದೇ ಕ್ಷೇತ್ರವನ್ನು ಮಾರಾಟ ಮಾಡಲು ನಂಜಪ್ಪರೆಡ್ಡಿ

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-15.pdf
www.ecourtsindia.com

ಅಥವಾ ಅವರ ಮನೆತನದವರಿಗೆ ಯಾವುದೇ ಹಕ್ಕು, ಅಧಿಕಾರ, ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

ಈ ದಾವೆ ವಿಚಾರಣೆ ನಡೆಯುತ್ತಿರುವ ಬಗ್ಗೆ ಪ್ರತಿವಾದಿ ನಂ: 1, 2 ಮತ್ತು ಲಕ್ಷ್ಮಮ್ಮ ರವರ ಗಮನದಲ್ಲಿದೆಯಾ ಎಂದರೆ ಸಾಕ್ಷಿಯು ಅವರು ಒಂದು ಬಾರಿ ಈ ಪ್ರಕರಣದಲ್ಲಿ ಬಂದು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-10 ಕ್ರಯಪತ್ರವನ್ನು ನಮ್ಮ ಪರವಾಗಿ ಬರೆದುಕೊಡುವ ಸಮಯದಲ್ಲಿ ಪ್ರತಿವಾದಿ ನಂ: 1, 2 ಮತ್ತು ಲಕ್ಷ್ಮಮ್ಮ ರವರಿಗೆ ಸರ್ವೆ ನಂ: 122 ರಲ್ಲಿ 6 ಗುಂಟೆಯಷ್ಟು ಜಮೀನು ಅವರ ಸ್ವಾಧೀನದಲ್ಲಿ ಇತ್ತು. ನಮಗೆ 6 ಗುಂಟೆಯಷ್ಟು ಕ್ರಯ ಮಾಡಿದವರು ಉಳಿದ ಜಮೀನನ್ನು ಯಾರಿಗೆ ಮತ್ತು ಎಷ್ಟು ವಿಸ್ತೀರ್ಣದ ಜಮೀನನ್ನು ಕ್ರಯಕ್ಕೆ ನೀಡಿರುತ್ತಾರೆಂದು ಗೊತ್ತಿಲ್ಲ. ನಿಡಿ-10 ಕ್ರಯಪತ್ರದ ಯಾವುದೇ ದಿಕ್ಕಿನಲ್ಲಿ ನಮಗೆ ಕ್ರಯ ನೀಡಿದವರ ಅಥವಾ ಮಾರಿದವರ ಹೆಸರು ಮತ್ತು ಸರ್ವೆ ನಂಬರನ್ನು ಕಾಣಿಸಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ಮುಖ್ಯವಿಚಾರಣೆಯ 4 ನೇ ಖಂಡಿಕೆಯಲ್ಲಿ ಲಕ್ಷ್ಮಮ್ಮನವರು ಕೆ.ನಾರಾಯಣನ್ ಎಂಬುವವರಿಗೆ ದಿ: 13-09-1979 ರಂದು 1 ಎಕರೆ ಜಮೀನನ್ನು ಮಾರಾಟ ಮಾಡಿದ್ದ ಬಗ್ಗೆ ಸಾಕ್ಷಿ ನುಡಿದಿದ್ದು, ಸದರಿ ಕ್ರಯಪತ್ರವನ್ನು ನೀವು ನೋಡಿರುತ್ತೀರಾ ಎಂಬ ಪ್ರಶ್ನೆಗೆ ನನ್ನ ವಕೀಲರು ಅದನ್ನು ನೋಡಿರುತ್ತಾರೆಂದು ನುಡಿಯುತ್ತಾರೆ. ಒಟ್ಟು ವಿಸ್ತೀರ್ಣ 1 ಎಕರೆ 19 ಗುಂಟೆ ಜಮೀನಿನಲ್ಲಿ ಯಾವ ಭಾಗದ 1 ಎಕರೆಯನ್ನು ಮಾರಾಟ ಮಾಡಿ ಯಾವ ಭಾಗದ ಜಮೀನನ್ನು ಉಳಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಲಕ್ಷ್ಮಮ್ಮ ರವರು 1 ಎಕರೆಯಷ್ಟು ಜಮೀನನ್ನು ಮಾರಾಟ ಮಾಡಿದ ನಂತರ ಉಳಿಕೆಯ 19 ಗುಂಟೆಯಷ್ಟು ಜಮೀನನ್ನು ಸದರಿ ಮಾರಾಟ ಮಾಡಿದ ಆಸ್ತಿಯ ಯಾವ ದಿಕ್ಕಿನಲ್ಲಿ ಇರುತ್ತದೆ ಎಂದು ಗೊತ್ತಿಲ್ಲ. ಹಾಗೆ ಉಳಿಕೆಯ 19 ಗುಂಟೆಯಷ್ಟು ಜಮೀನಿನಲ್ಲಿ ನಮಗೆ ಯಾವ ಭಾಗದಲ್ಲಿ 6 ಗುಂಟೆಯಷ್ಟು ಜಮೀನನ್ನು ಮಾರಾಟ ಮಾಡಲಾಗಿದೆ ಎಂದರೆ ಸಾಕ್ಷಿಯು ನಿಡಿ-10 ಕ್ರಯಪತ್ರದಲ್ಲಿ ಕಾಣಿಸಲಾದ ಜಮೀನನ್ನು ನಮಗೆ ಮಾರಾಟ ಮಾಡಲಾಗಿದೆ ಎಂದು ನುಡಿಯುತ್ತಾರೆ.

ನಮಗೆ 6 ಗುಂಟೆಯಷ್ಟು ಜಮೀನನ್ನು ಮಾರಾಟ ಮಾಡಿದ ಮೇಲೆ ಉಳಿಕೆಯ 13 ಗುಂಟೆ ಜಮೀನು ಯಾವ ಭಾಗದಲ್ಲಿದೆ ಮತ್ತು ಅದರ ಸ್ವಾಧೀನವನ್ನು ಯಾರು ಹೊಂದಿರುತ್ತಾರೆಂದು ಗೊತ್ತಿಲ್ಲ. ಸರ್ವೆ ನಂ: 122 ರಲ್ಲಿ ನಮಗೆ ಮಾರಾಟ

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-15.pdf

ಮಾಡಿದ ಲಕ್ಷ್ಮಮ್ಮ ರವರ ಉಳಿಕೆಯ 13 ಗುಂಟೆ, ನಾವು ಕ್ರಯಕ್ಕೆ ಪಡೆದಿರುವೆರೆನ್ನಲಾದ 6 ಗುಂಟೆ ಜಮೀನು ಅಥವಾ ದಿಃ 14-10-1968 ರಲ್ಲಿ ಕಾಣಿಸಲಾದ 1 ಎಕರೆ 19 ಗುಂಟೆ ಜಮೀನನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಃ 122 ರ ಯಾವುದೇ ಭಾಗದಲ್ಲಿ ನಂಜಪ್ಪರೆಡ್ಡಿರವರಾಗಲೀ, ಲಕ್ಷ್ಮಮ್ಮ ಮತ್ತು ಅವರ ಕುಟುಂಬದವರಾಗಲೀ ಅಥವಾ ನಾವಾಗಲೀ ಸ್ವಾಧೀನವನ್ನು ಹೊಂದಿಲ್ಲ ಎಂದರೆ ಸರಿಯಲ್ಲ.

ದಿಃ 13-09-1979 ರ ಕ್ರಯಪತ್ರದ ದಾಖಲೆಯನ್ನು ಕೊಡಲು ಏನಾದರೂ ತೊಂದರೆ ಇದೆಯೇ ಎಂದರೆ ಸಾಕ್ಷಿಯು ವಿಚಾರಿಸಿ ನೋಡಬೇಕು ಎಂದು ನುಡಿಯುತ್ತಾರೆ. ದಿಃ 13-09-1979 ಮತ್ತು ದಿಃ 14-10-1968 ರ ಕ್ರಯಪತ್ರಗಳನ್ನು ಈ ದಾವೆಯಲ್ಲಿ ಹಾಜರಿಸಿದ್ದಲ್ಲಿ ನಿಜಾಂಶ ಗೊತ್ತಾಗುತ್ತದೆಂದು ಉದ್ದೇಶಪೂರ್ವಕವಾಗಿ ಅವುಗಳನ್ನು ಹಾಜರುಪಡಿಸದೇ, ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾನೂನು ಪ್ರಕಾರ ರೀಗ್ರಾಂಟ್ ಆಗದೇ ಸರ್ವೆ ನಂಃ 122 ರ ಮೇಲೆ ನಮಗಾಗಲೀ, ಲಕ್ಷ್ಮಮ್ಮರವರಿಗಾಗಲೀ ಅಥವಾ ನಂಜಪ್ಪರೆಡ್ಡಿರವರಿಗಾಗಲೀ ಹಕ್ಕು ಬದಲಾವಣೆ ಆಗುವುದಿಲ್ಲ ಎಂದರೆ ಸರಿಯಲ್ಲ.

ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಸರ್ವೆ ನಂಃ 122 ಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಸೃಷ್ಟಿಸಿಕೊಂಡು, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಃ 122 ಕ್ಕೆ ಸಂಬಂಧಪಟ್ಟಂತೆ ಹಿಸ್ಸಾ ಸರ್ವೆಯಾದಂತಹ ನಕ್ಷೆ ಅಥವಾ ಟಿಪ್ಪಣಿಯನ್ನು ಕ್ರಯಪತ್ರ ಮಾಡಿಕೊಳ್ಳುವ ಸಮಯದಲ್ಲಿ ನೋಡಿರುತ್ತೇವೆ. ಸಾಕ್ಷಿಗೆ ಸೆಕೆಂಡರಿ ರೀಕ್ಲಾಸ್ ಟಿಪ್ಪಣಿ ಮತ್ತು ಹಿಸ್ಸಾ ಸರ್ವೆ ಪಕ್ಕಾ ಪುಸ್ತಕದ ದಾಖಲೆಗಳ ದೃಡೀಕೃತ ನಕಲುಗಳನ್ನು ತೋರಿಸಿದಾಗ ಸದರಿ ದಾಖಲೆಗಳು ನಾನು ಕ್ರಯಪತ್ರ ಮಾಡಿಕೊಳ್ಳುವ ಸಮಯದಲ್ಲಿ ನೋಡಿದ ದಾಖಲೆಗಳಲ್ಲಾ ಎಂದು ನುಡಿಯುತ್ತಾರೆ. ಅನುಕೂಲದ ಸಲುವಾಗಿ ಸದರಿ ದಾಖಲೆಗಳನ್ನು ಕಡತಕ್ಕೆ ತೆಗೆದುಕೊಳ್ಳಲಾಗಿದೆ. ಸದರಿ ದಾಖಲೆಗಳನ್ನು ನೋಡಿ ಅದರಲ್ಲಿ ಬರೆಯಲಾದ ಸರ್ವೆ ನಂಬರ್ ಹೇಳಲು ಸಾಧ್ಯವೇ ಎಂದರೆ ಸಾಕ್ಷಿಯು ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ನಮೂದಿಸಲಾದ ಗ್ರಾಮದ ಹೆಸರು ಹೇಳಲು ಆಗುವುದಿಲ್ಲ. ಸದರಿ ದಾಖಲೆಗಳಲ್ಲಿ ಸರ್ವೆ ನಂಃ 122/3 ರ ಬಗ್ಗೆ ವಿವರ ಕಾಣುವುದಿಲ್ಲ. ಕುಂದಲಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂಃ 122/3, 122/4 ಮತ್ತು 122/5 ಗಳಿಗೆ

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-15.pdf

ಸಂಬಂಧಿಸಿದ ಸರ್ವೆ ಹಿಸ್ಸಾ ಪಕ್ಕಾ ಇರುತ್ತದೆ ಎಂದರೆ ಸರಿಯಲ್ಲ. ಕುಂದಲಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ: 122/1, 122/2 ಮತ್ತು 122/3 ಗಳಿಗೆ ಸಂಬಂಧಿಸಿದ ಸೆಕೆಂಡರಿ ರೀಕ್ಲಾಸ್ ಹಿಸ್ಸಾ ಟಿಪ್ಪಣಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ: 122 ರ 1 ರಿಂದ 5 ರವರೆಗಿನ ದಾಖಲೆಗಳನ್ನು ತಾಲ್ಲೋಕು ಕಚೇರಿಯಲ್ಲಿ ನೋಡಿರುತ್ತೀರಾ ಎಂದರೆ ಸಾಕ್ಷಿಯು ಸರ್ವೆ ನಂ: 122/4 ಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೋಡಿರುತ್ತೆನೆ ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ಹಾಜರಿಸಲಾದ ದಾಖಲೆಗಳನ್ನು ಹೊರತುಪಡಿಸಿ, ಸರ್ಕಾರದಿಂದ ಕೊಟ್ಟ ಬೇರೆ ದಾಖಲೆಗಳನ್ನು ನೋಡಿ ಸರ್ವೆ ನಂ: 122 ರಲ್ಲಿ ನಮ್ಮ ನಿಡಿ-10 ಕ್ರಯಪತ್ರದಲ್ಲಿ ಕಾಣಿಸಲಾದ ಆಸ್ತಿ ಎಲ್ಲಿ ಬರುತ್ತದೆಂದು ಹೇಳಲು ಸಾಧ್ಯವಿಲ್ಲ.

ವಾದಿಗಳು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಪತ್ರ ಮಾಡಿಕೊಳ್ಳುವ ಮುಂಚೆ ಕುಂದಲಹಳ್ಳಿ ಗ್ರಾಮದ ಗ್ರಾಮ ನಕ್ಷೆಯನ್ನು ನೋಡಿರುತ್ತೇನೆ. ಇದೀಗ ಸಾಕ್ಷಿಗೆ ಎಡಿಎಲ್ಆರ್ ಕಚೇರಿಯವರು ನೀಡಿದ ಕುಂದಲಹಳ್ಳಿ ಗ್ರಾಮದ ಗ್ರಾಮ ನಕ್ಷೆ ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಸದರಿ ದಾಖಲೆಯಲ್ಲಿ ಕುಂದಲಹಳ್ಳಿ ಗ್ರಾಮ ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ಸದರಿ ಗ್ರಾಮ ನಕ್ಷೆ ದಾಖಲೆಯಲ್ಲಿ ಸರ್ವೆ ನಂ: 122 ಎಲ್ಲಿ ಬರುತ್ತದೆಂದು ಹೇಳಲು ಆಗುವುದಿಲ್ಲ. ಸದರಿ ಗ್ರಾಮ ನಕ್ಷೆಯಲ್ಲಿ ಸರ್ವೆ ನಂ: 122 ಗ್ರಾಮವನ್ನು ನಿಖರವಾಗಿ ತೋರಿಸಲಾಗೆ ಎಂದರೆ ನನಗೆ ಗೊತ್ತಿಲ್ಲ. ಗ್ರಾಮ ನಕ್ಷೆಯಲ್ಲಾಗಲೀ ಅಥವಾ ಯಾವುದೇ ಕಂದಾಯ ದಾಖಲೆಯಲ್ಲಿ ಸರ್ವೆ ನಂ: 122 ಕ್ಕೆ ಹೊಂದಿಕೊಂಡಂತೆ ಸರ್ವೆ ನಂ: 125 ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಗ್ರಾಮ ನಕ್ಷೆಯಲ್ಲಿ ಸರ್ವೆ ನಂ: 122 ಮತ್ತು ಸರ್ವೆ ನಂ: 125 ಗಳನ್ನು ಸ್ಪಷ್ಟವಾಗಿ ನಕ್ಷೆಯಲ್ಲಿ ಕಾಣಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅನುಕೂಲದ ಸಲುವಾಗಿ ಕಡತಕ್ಕೆ ತೆಗೆದುಕೊಳ್ಳಲಾಗಿದೆ.

ನಿಪಿ-19 ರಲ್ಲಿ ಹಾಜರಿಸಲಾದ ನೋಟೀಫಿಕೇಷನ್ ಬಗ್ಗೆ ನನಗೇನೂ ಗೊತ್ತಿಲ್ಲ. ಸದರಿ ದಾಖಲೆಗೆ ಸಂಬಂಧಿಸಿದಂತೆ ನಮ್ಮ ವಕೀಲರಿಗೆ ನಾನು ಯಾವುದೇ ಮಾಹಿತಿ ನೀಡಿಲ್ಲ. ಕುಂದಲಹಳ್ಳಿ ಗ್ರಾಮ ಇನಾಮ್ ಗ್ರಾಮದ ವ್ಯಾಪ್ತಿಗೆ ಬರುತ್ತದೆ ಎಂದು ನಾನು ಯಾವುದೇ ಸರ್ಕಾರಿ ಕಚೇರಿಗೆ ಭೇಟಿ ನೀಡಿ ಪರಿಶೀಲಿಸಿಲ್ಲ ಎಂದರೆ ಸರಿ. ಆ ಬಗ್ಗೆ ದಾಖಲೆಗಳನ್ನು ನೋಡದೇ ಇರುವ ಕಾರಣ, ಕುಂದಲಹಳ್ಳಿ ಗ್ರಾಮ

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-15.pdf

ಇನಾಮ್ ಗ್ರಾಮದ ವ್ಯಾಪ್ತಿಗೆ ಬರುತ್ತದೆಯೋ ಅಥವಾ ಇಲ್ಲವೋ ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಿಪಿ-20 ದಾಖಲೆ ಪ್ರಿಲಿಮಿನರಿ ರೆಕಾರ್ಡ್ಸ್ ಇನ್ ರೆಸ್ಪೆಕ್ಟ್ ಆಫ್ ಸರ್ವೆ ನಂ: 122/1, 122/2, 122/3 ಕುಂದಲಹಳ್ಳಿ ಗ್ರಾಮಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿಯಲ್ಲ.

ವಿಶೇಷ ಜಿಲ್ಲಾಧಿಕಾರಿಗಳು ಸರ್ವೆ ನಂ: 122 ಕ್ಕೆ ಸಂಬಂಧಪಟ್ಟಂತ ಗ್ರಾಂಟ್ ಪ್ರೊಸೀಡಿಂಗ್ಸ್‌ಗಳಿಗೆ ಸಂಬಂಧಪಟ್ಟ ದಾಖಲೆಗಳ ದೃಡೀಕೃತ ನಕಲುಗಳನ್ನು ನಿಪಿ-21 ಮತ್ತು ನಿಪಿ-22 ರಲ್ಲಿ ವಾದಿಯವರು ಹಾಜರಿಸಿರುತ್ತಾರೆ ಎಂದರೆ ಸರಿಯಲ್ಲ. ಪೂಜಪ್ಪ ಎಂಬುವವರು ವಿಶೇಷ ಜಿಲ್ಲಾಧಿಕಾರಿಗಳ ಮುಂದೆ ಸರ್ವೆ ನಂ: 122 ರಲ್ಲಿ ನನಗೂ ಹಕ್ಕು ಇದೆ ಎಂದು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಪೂಜಪ್ಪ ರವರು ವಿಶೇಷ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ವಿಚಾರಣೆಯಲ್ಲಿ ನೀಡಿದ ಹೇಳಿಕೆಯನ್ನು ನಿಪಿ-23 ರಲ್ಲಿ ವಾದಿಯವರು ಹಾಜರುಪಡಿಸಿದ್ದು ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ವಾದಿಯರು ನಿಪಿ-24 ರಲ್ಲಿ ಹಾಜರಿಸಿದ ವಿಭಾಗ ಪತ್ರದ ಬಗ್ಗೆ ಏನಾದರೂ ವಿಚಾರಣೆ ಮಾಡಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೇನೂ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂ: 122 ರ ಖಾತಾ ಬದಲಾವಣೆಗೆ ಸಂಬಂಧಪಟ್ಟಂತೆ ವಿಶೇಷ ಜಿಲ್ಲಾಧಿಕಾರಿಗಳ ನ್ಯಾ.ದಲ್ಲಿ ನಿಪಿ-29 ರಂತೆ ಆದೇಶವಾದ ಬಗ್ಗೆ ಗೊತ್ತಾ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿ: 04-07-2011 ರಂದು 1 ನೇ ವಾದಿ ನಿಪಿ-12 ರಂತೆ ಪ್ರತಿವಾದಿಯರ ವಿರುದ್ಧ ದಾವಾ ಆಸ್ತಿಯ ಬಗ್ಗೆ ಗಲಾಟೆ ಮಾಡಿದ್ದರ ಬಗ್ಗೆ ಮಹದೇವಪುರ ಪೊ.ಠಾಣೆಯಲ್ಲಿ ದೂರನ್ನು ದಾಖಲಿಸಿರುವ ಬಗ್ಗೆ ಗೊತ್ತಿದೆಯಾ ಎಂದರೆ ಸಾಕ್ಷಿಯು ಗೊತ್ತಿದೆ ಎಂದು ನುಡಿಯುತ್ತಾರೆ. ಹಾಗೆ ದೂರು ದಾಖಲಾದ ನಂತರ ಪೊಲೀಸರು ಬಂದು ವಿಚಾರಣೆ ಮಾಡಿದಾಗ ನಮ್ಮ ದಾಖಲೆಗಳನ್ನು ಕೊಟ್ಟಿರುತ್ತೇವೆ, ಅದು ಸರಿ ಇದೆ ಎಂದು ಹೇಳಿರುತ್ತಾರೆ. ದೂರು ದಾಖಲಾದ ಮಾರನೆಯ ದಿನವೇ ಪೊಲೀಸರು ಬಂದು ವಿಚಾರಣೆ ಮಾಡಿರುತ್ತಾರೆ. ಹಾಗೆ ವಿಚಾರಣೆ ಮಾಡಿದಾಗ ಪೊಲೀಸರು ಪಂಚನಾಮೆ ಮಾಡಿರುತ್ತಾರಾ ಎಂದರೆ ನನಗೆ ನೆನಪಿಲ್ಲ. ಸದರಿ ದೂರಿನ ಆಧಾರದ ಮೇಲೆ ಸಂಬಂಧಪಟ್ಟ ಪೊಲೀಸರು ಯಾವುದೇ ಕ್ರಮ ಜರುಗಿಸದೇ ಇರುವ ಕಾರಣ, ಅವರೆಲ್ಲರ ಮತ್ತು ನಮ್ಮೆಲ್ಲರ

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-15.pdf
www.ecourtsindia.com

ವಿರುದ್ಧ ಅಸಿಸ್ಟೆಂಟ್ ಕಮೀಷನರ್ ಆಫ್ ಪೊಲೀಸ್, ಹಲಸೂರು ರವರಿಗೆ ದೂರನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿಃ 04-07-2011 ರಂದು ಪ್ರತಿವಾದಿಯರು ದಾವಾ ಆಸ್ತಿಯ ಬಳಿ ಬಂದು ಗಲಾಟೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ನಿಜಾಂಶಗಳು ನನಗೆ ಗೊತ್ತಿದ್ದರೂ ಸಹಾ, ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಸತ್ಯಕ್ಕೆ ದೂರವಾದ ವಿಷಯಗಳನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ** - ಏನೂ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ದಿನಾಂಕಃ 08.06.2023 ರಂದು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

63ನೇ ಅಪರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಸಿಸಿಹೆಚ್-64, ಸಿಸಿಸಿ, ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-15.pdf